ಸಾಕ್ಷಿಗೆ ಇಂದು ದಿನಾಂಕ 18-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಶ್ರೀ ಎಸ್ ಎ ಪ್ರತಿವಾದಿ ಪರ ವಕೀಲರಿಂದ**

13. ಸಾಮಾನ್ಯವಾಗಿ ಮಾರಾಟಗಾರರು ಖರೀದಿ ಪತ್ರದಲ್ಲಿ ಯಾವ ದಿಕ್ಕಿನ ಕಡೆಯ ಜಮೀನನ್ನು ಮಾರಾಟ ಮಾಡುತ್ತಿದ್ದೇನೆ ಅಂತಾ ಖರೀದಿ ಪತ್ರದಲ್ಲಿ ನಮೂದು ಮಾಡುತ್ತಾರೆ ಅಂತಾ ಸೂಚಿಸಿದಾಗ, ಸಾಕ್ಷಿಯು ಪೈಕಿ ಜಮೀನು ಖರೀದಿ ಮಾಡಿದ್ದಲ್ಲಿ ಯಾವ ದಿಕ್ಕಿನ ಕಡೆ ಜಮೀನು ಖರೀದಿ ಮಾಡಲಾಗುತ್ತದೆ ಅಂತಾ ನಮೂದು ಮಾಡಲಾಗುವುದು ಅಂತಾ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸಾಕ್ಷಿಯು ಸಂಪೂರ್ಣ ಜಮೀನು 2 ಎಕರೆ 28 ಗುಂಟೆ ಖರೀದಿ ಮಾಡಿದ್ದರಿಂದ ನನ್ನ ಖರೀದಿ ಪತ್ರದಲ್ಲಿ ಪೈಕಿ ಇಲ್ಲ.

14. ನಾನು ನನ್ನ ವಾದ ಪತ್ರದಲ್ಲಿ ಪ್ರತಿವಾದಿ ನಂ. 2 ಇವರು 3 ಎಕರೆ 16 ಗುಂಟೆ ಮಾಲೀಕ ಇದ್ದ ಅದರ ಪೈಕಿ 2 ಎಕರೆ 28 ಗುಂಟೆ ಜಮೀನು ಖರೀದಿ ಮಾಡಿದ್ದೇನೆ ಅಂತಾ ಬರೆಸಿರುವುದಿಲ್ಲ. ನಮೂನೆ ಸಂಖ್ಯೆ 10 ನ್ನು ಒದಗಿಸುವಂತೆ ತಹಶೀಲ್ದಾರರವರಿಗೆ ನಾನು ಒಂದು ಅರ್ಜಿಯನ್ನು ಕೊಟ್ಟಿದ್ದೆ, ಅದರ ಕಛೇರಿ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಯನ್ನು ಸರ್ವೇ ನಂ. 758/ಅ ನೇದ್ದರ ಪಹಣಿ ಪತ್ರಿಕೆ ತೋರಿಸಲಾಗಿ ಅದರಲ್ಲಿ ಕ್ಷೇತ್ರ 12 ಎಕರೆ 14 ಗುಂಟೆ ಅಂತಾ ನಮೂದು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಪಹಣಿಯನ್ನು ನಾನು ಈ ಮುಂಚೆ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಹಣಿ ಪತ್ರಿಕೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಸಹಾಯಕ ಆಯುಕ್ತಕರು ಲಿಂಗಸಗೂರು ಇವರ ಆದೇಶದ ಮೇರೆಗೆ ಮತ್ತು ಆಕಾರಬಂಧ ಪ್ರಕಾರ ವಿಸ್ತೀರ್ಣವನ್ನು ತಿದ್ದುಪಡಿ ಮಾಡಲಾಗಿದೆ ಎಂದು ನಮೂದು ಇಲ್ಲ ಎಂದರೆ, ಸಾಕ್ಷಿಯು ಸದರಿ ಆದೇಶ 1998 ಸಾಲಿನಲ್ಲಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ಆದೇಶ 1998 ಸಾಲಿನಲ್ಲಿ ಮಾಡಲಾಗಿದ್ದರಿಂದ ನಿಡಿ-1 ಪಹಣಿಯಲ್ಲಿ ಅದರ ಬಗ್ಗೆ ನಮೂದು ಇಲ್ಲ. 1998 ಸಾಲಿನ ನಂತರ ಪಹಣಿ ಪತ್ರಿಕೆಯಲ್ಲಿ ತಿದ್ದುಪಡಿ ಮಾಡಲಾಗಿದೆ.

15. ಹನಮಂತಪ್ಪ ತಂದೆ ಪವಾಡೆಪ್ಪರವರಿಗೆ 4 ಎಕರೆ 18 ಗುಂಟೆ ಜಮೀನನ್ನು ಅವರ ಭಾಗಕ್ಕೆ ಬಂದಿತ್ತು ಎಂದರೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಹನಮಂತಪ್ಪ ಮತ್ತು ಸಣ್ಣದುರ್ಗಪ್ಪ ಮಧ್ಯೆ ಭಾಗ ಆದ ಬಗ್ಗೆ ನಮೂದು ಮಾಡಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ನಮ್ಮ ವಕೀಲರಿಗೆ ಗೊತ್ತು.

16. ವಾದಪತ್ರ ತಯಾರಿಸಿದ ನಂತರ ಅದರಲ್ಲಿಯ ಅಂಶಗಳು ನನಗೆ ಓದಿ ಹೇಳಿದ್ದಾರೆ. ಬಹಳ ವರ್ಷಗಳು ಆದ ಕಾರಣ ಅದರ ಬಗ್ಗೆ ನನಗೆ ನೆನಪಿಲ್ಲ. ಹನಮಂತಪ್ಪ ಪ್ರತಿವಾದಿ ನಂ.2 ರವರ ತಂದೆ ಎಂದರೆ ಸರಿ. ಹನಮಂತಪ್ಪರವರು ರಾಮರೆಡ್ಡಿ ತಂದೆ ನಾಗಿರೆಡ್ಡಿ ರವರ ಪರ 4 ಎಕರೆ 18 ಗುಂಟೆ ಪೈಕಿ 2 ಎಕರೇ 27 ಗುಂಟೆ ಖರೀದಿ ಪತ್ರ ದಿಃ 21-08-1984 ರಂದು ಮಾರಾಟ ಮಾಡಿದ್ದಾರೆ ನಂತರ ಅವರಿಗೆ 1 ಎಕರೆ 31 ಗುಂಟೆ ಜಮೀನು ಉಳಿಯಿತು ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿದಾರ ನಾನು ಖರೀದಿ ಮಾಡಿದ ವರ್ಷದ ಪಹಣಿ ಪತ್ರಿಕೆಯನ್ನು ನೋಡಿ ವಕೀಲರ ಕಾನೂನು ಸಲಹೆ ಮೇರೆಗೆ ಖರೀದಿ ಮಾಡಿದ್ದೇನೆ.

17. ಖರೀದಿ ಕರಾರು ಪತ್ರ ವಕೀಲರು ಮಾಡಿರುತ್ತಾರೆ, ನೊಂದಣಿ ಖರೀದಿ ಪತ್ರ ದಾಖಲೆಯನ್ನು ದಸ್ತಾವೇಜು ಬರಹಗಾರರು ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳ ಆದೇಶದ ನಂತರ ನಾನು ದಾವಾ ಜಮೀನಿಗೆ ಸಂಬಂಧಪಟ್ಟಂತೆ ಭೂಾ ಕಂದಾಯ ಕಟ್ಟುತ್ತಿದ್ದೇನೆ. ಆದರೆ ಭೂ ಕಂದಾಯ ರಶೀದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

18. ಗೌರವಾನ್ವಿತ ಉಚ್ಚ ನ್ಯಾಯಾಲಯ ಕಲಬುರ್ಗಿ ಇವರು ಜಿಲ್ಲಾಧಿಕಾರಿಗಳ ಆದೇಶದ ವಿರುದ್ದ ಯಥಾಸ್ಥಿತಿ ಕಾಪಾಡಲು ಆದೇಶಿಸಿದರು. ಸದರಿ ಮೇಲ್ಮವಿ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಯಥಾಸ್ಥಿತಿ ಕಾಪಾಡಲು ಆದೇಶಿಸಿದ ಪ್ರತಿ ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಪಿ-82 ಪಹಣಿಯನ್ನು ನಾನು ನೋಡಿಲ್ಲ. ಸಹಾಯಕ ಆಯುಕ್ತಕರು ಲಿಂಗಸಗೂರು ಇವರ ಆದೇಶದ ನಿಖರ ದಿನಾಂಕ ಗೊತ್ತಿಲ್ಲ. ಸಾಕ್ಷಿ ಪುನಃ ಹೇಳುವುದೇಂದನೆಂದರೆ ನಿಪಿ-82 ಪಹಣಿಯನ್ನು ನ್ಯಾಯಾಲಯಕ್ಕೆ ನಾನೇ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-82 ಪಹಣಿಯಲ್ಲಿ

ಸಹಾಯಕ ಆಯುಕ್ತಕರು ಲಿಂಗಸಗೂರು ಇವರ ಆದೇಶದ ಮೇರೆಗೆ ತಿದ್ದುಪಡಿ ಮಾಡಲಾಗಿದೆ ಅಂತಾ ನಮೂದು ಇಲ್ಲ ಎಂದರೆ ಸರಿ. ನಿಪಿ-83 ಪಹಣಿಯಲ್ಲಿ ಸಹಾಯಕ ಆಯುಕ್ತಕರು ಲಿಂಗಸಗೂರು ಇವರ ಆದೇಶದ ಮೇರೆಗೆ ತಿದ್ದುಪಡಿ ಮಾಡಲಾಗಿದೆ ಅಂತಾ ನಮೂದು ಇಲ್ಲ ಅಂತಾ ಸೂಚಿಸಿದಾಗ ಸಾಕ್ಷಿಯು ಹೆಚ್ಚುವರಿ ಭೂಮಿ ಅಂತಾ ಆದೇಶದ ಮಾಡಿದ್ದು ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಹೇಳುವುದೇನೆಂದರೆ ಪಹಣಿಯಲ್ಲಿ ತಿದ್ದುಪಡಿ ಮಾಡಿದ ವಿಷಯ ನನಗೆ ಗೊತ್ತಿಲ್ಲ, ಆದರೆ ಹೆಚ್ಚುವರಿ ಭೂಮಿ ಪಹಣಿಯಲ್ಲಿ ಸೇರಿಸಿದ ಬಗ್ಗೆ ನನಗೆ ಗೊತ್ತು.

19. ನಿಪಿ-83 ಪಹಣಿಯಲ್ಲಿ ಸಹಾಯಕ ಆಯುಕ್ತಕರು ಲಿಂಗಸಗೂರು ಇವರು ಹೆಚ್ಚುವರಿ ಭೂಮಿ ಸೇರ್ಪಡೆ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಪಿ-82 ಪಹಣಿಯಲ್ಲಿ ಆಕಾರಬಂಧ ಪ್ರಕಾರ ಕಲಂ ನಂ.2 ರಲ್ಲಿ ಕ್ಷೇತ್ರವನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿ. ನಿಪಿ-83 ಪಹಣಿಯಲ್ಲಿ ಕಲಂ ನಂ.3 ರಲ್ಲಿ ಎಕರೆ ಗುಂಟೆ ಕ್ಷೇತ್ರವನ್ನು ತಿದ್ದುಪಡಿ ಮಾಡಲಾಗಿದೆ ಅಂತಾ ಸಾಕ್ಷಿಯನ್ನು ಸೂಚಿಸಲಾಗಿ ಸಾಕ್ಷಿಯು ಸದರಿ ದಾಖಲೆ ಸರ್ಕಾರದ ದಾಖಲೆ ಆಗಿದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಮುಂದುವರೆದ ಪಾಟೀ ಸವಾಲಿಗಾಗಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

Sd/-

**ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು**